

ಉಲ್ಲಸಿತವಾದವು. ಆದರೆ, ಮನಸೇ ಪ್ರಕ್ಷುಬ್ಧಗೊಂಡ ಕಡಲಾಗಿತ್ತು. ಒಂದು ಹಟ ಹೇಗೆ ಮನುಷ್ಯನನ್ನೇ ಮೆತ್ತಗೆ ಮಾಡಿಬಿಡುತ್ತದಲ್ಲ? ಇದಕ್ಕೆ ಇಷ್ಟು ಶಕ್ತಿಯಿರುವುದರಿಂದಲೇ ಇರಬೇಕು ಎಂಥ ಬುದ್ಧಿಗೂ ಅದು ಒಂದು ಮಾಯದ ಮುಸುಕನ್ನು ಕವಿಸಿಬಿಡುತ್ತದೆ. ಹಾಗಾಗಿಯೇ ಜನ ತಮ್ಮ ಆರೋಗ್ಯ, ಆನಂದ ಮತ್ತು ಮಾನಾಭಿಮಾನಗಳನ್ನೆಲ್ಲ ಪಣಕ್ಕಿಟ್ಟು ಕೋರ್ಟ್ ಕಚೇರಿಗಳಲ್ಲಿ ತಮ್ಮ ಆಯುಷ್ಯವನ್ನೇ ಸವೆಸಿಬಿಡುತ್ತಾರೆ. ಪ್ರಾಣಿ, ಪಕ್ಷಿ, ಕ್ರಿಮಿ, ಕೀಟಗಳೇ ನಿಜಾರ್ಥದಲ್ಲಿ ಬುದ್ಧಿ ಇರುವಂಥವು. ಚಟವಿಲ್ಲವಾಗಿ ಮಾನವಂತರು; ಹಟವಿಲ್ಲವಾಗಿ ಆನಂದಮಾರ್ಗಿಗಳು; ಸಂಗ್ರಹಬುದ್ಧಿಯಿಲ್ಲವಾಗಿ ಸಂತೃಪ್ತರು; ಕಳೆದುಕೊಳ್ಳುವ ಭಯವಿಲ್ಲವಾಗಿ ನಿರಾಳರು.

ಕಣ್ಣಿಗೆ ಹಿತವಾಗಿದ್ದ ಬೆಳಕಿನ ಸೋಂಕಿಲ್ಲದ ನಿಷ್ಕಲ್ಮಶ ರಾತ್ರಿ. ಮನುಷ್ಯ ಜಗತ್ತಿನ ಯಾವೊಂದೂ ಸದ್ದಿರದೆ ಕಿವಿಗಳೂ ಪುಳಕಗೊಂಡಿದ್ದವು. ಸಹಜವಾದ ಸಾವಯವವಾದ ಜೀವಪರಿಸರದಿಂದ ದೂರ ಸರಿಸರಿದೇ ಮನುಷ್ಯ ಇಷ್ಟು ಮನಮಾಲಿನ್ಯ ಹೊತ್ತು ಬಳಲುವಂತಾಗಿದೆ ಎನಿಸಿತು.

ಈ ಸಂದರ್ಭಕ್ಕೆ ಒಂದು ಸಿಗರೇಟ್‌ನ ಸಾಥಿ ಇರಬೇಕಿತ್ತು... ಥೂ! ಈ ಬುದ್ಧಿಗಿಷ್ಟು ಬೆಂಕಿ ಹಾಕ! ಉಣ್ಣೋ ತಾಟಲ್ಲಿ ಉಚ್ಚೆ ಹೊಯ್ಯೋ ಚಾಳಿ ಇದರದು.

ಹಂಗೂ ಹಿಂಗೂ ಇವತ್ತು ರಾತ್ರಿ ಹನ್ನೆರಡು ದಾಟಿಸಬೇಕು.

ಒಟ್ಟಿನಲ್ಲಿ ಸೈಕಲ್ ತಾತ ಸುಳ್ಳುಗಾರನಾಗಬೇಕು.

## 5

ಕತ್ತಲು ಸುತ್ತ ನಾಲ್ಕು ಕಡೆಯಿಂದಲೂ ಇಡೀ ಜಗತ್ತನ್ನು ಮುತ್ತಿಕೊಂಡಿತ್ತು. ಸುತ್ತೆಂಟು ದಿಕ್ಕುಗಳಲ್ಲೂ ಶತ್ರು ಸೈನ್ಯ ಘೇರಾಯಿಸಿಕೊಂಡು ತಪ್ಪಿಸಿಕೊಳ್ಳಲು ಅವಕಾಶವೇ ಇಲ್ಲದಾದಾಗ ಅನಿವಾರ್ಯವಾಗಿ ಸೋಲೊಪ್ಪಿಕೊಂಡು ಶರಣಾಗುವ ಅನ್ಯಾಕ್ರಾಂತ ಪ್ರದೇಶದಂತೆ ಆ ಹೊಲವೂ ಕತ್ತಲ ತೆಕ್ಕೆಯಲ್ಲಿ ಏಕವಾಗಿತ್ತು. ಗಾಳಿಯಲ್ಲಿ ಅಲುಗುವ ಮರದ ಎಲೆಗಳು. ತರಗೆಲೆ ಮೇಲೆ ಚರಪರ ಸದ್ದು ಮಾಡುತ್ತ ಚಲಿಸುತ್ತಿರುವ ಹುಳಹುಪ್ಪಡಿಗಳು. ಜೀಂಂಯ್ ಎನ್ನುವ ಜೀರುಂಡೆಗಳ ಏಕಕಂಠದ ಉತ್ಕಂಠಿತ ಸಮೂಹಗಾನ. ಕೆರೆ ಮುಂದಣ ಮಶಾಣದಿಂದ ಗೂಕೂಕ್ ಗೂಕ್ ಎಂದು ಭಯಾನಕವಾಗಿ ಕೂಗುತ್ತಿರುವ ಒಂಟಿ ಗೂಗಿ. ಒಂದೇ ಒಂದು ಮನುಷ್ಯಲೋಕದ ಸದ್ದಿಲ್ಲ. ಶುಶ್ರೂಷಕವಾಗಿದ್ದ ಈ ಕತ್ತಲನ್ನು ಸರಿಯಾಗಿ ಕಣ್ತೆರೆದು ನೋಡಿದರೆ ಇದೇ ಒಂದು ಬೆಳಕಿನಂತಿತ್ತು. ಇದನ್ನು ಕರಿಬೆಳದಿಂಗಳು ಎಂದು ಕರೆಯಬೇಕೆನಿಸಿತು. ರಾತ್ರಿ ಎಂದರೆ ಮತ್ತೆ ನನಗೆ ನೆನಪಾಗುವುದು ಸೈಕಲ್ ತಾತನೇ.

ಒಮ್ಮೆ ಆತ ಅಮ್ಮನಿಗೆ ಹೇಳುವಾಗ ನಾನಲ್ಲೇ ಇದ್ದೆ.

ಆತನ ಪ್ರಕಾರ ಸಂಜೆ ಆರರಿಂದ ಮುಂಜಾನೆ ಆರರವರೆಗೆ ತಲಾ ನಾಲ್ಕು ತಾಸುಗಳ ಮೂರು ಪ್ರಹರಗಳು ಇರುತ್ತವಂತೆ. ಸಂಜೆ ಆರರಿಂದ ಹತ್ತರ ನಾಲ್ಕು ತಾಸಿನ ಪ್ರಹರವು ರಾಜಸಸ್ವರೂಪದ್ದಾಗಿದ್ದು ಇದಕ್ಕೆ ಲಕ್ಷ್ಮಿ ಅಧಿದೇವತೆ. ಆದ್ದರಿಂದಲೇ ಈ ಅವಧಿಯಲ್ಲಿ ಯಾರೂ ಕಸ ಚೆಲ್ಲುವುದಿಲ್ಲ. ಯಾರಿಗೂ ದುಡ್ಡು ಕೊಡುವುದಿಲ್ಲ. ರಾತ್ರಿ ಹತ್ತರಿಂದ ಮಧ್ಯರಾತ್ರಿ ಎರಡರವರೆಗಿನ ನಾಲ್ಕು ತಾಸಿನ ಪ್ರಹರವು ತಾಮಸ ಸ್ವರೂಪದ್ದಾಗಿದ್ದು ಇದರ ಅಧಿದೇವತೆ ಕಾಳಿ. ಇದು ಭೂತ ಪ್ರೇತಗಳು ಸಂಚರಿಸುವ, ತಂತ್ರ–ಮಂತ್ರ–ಬಲಿ ಇತ್ಯಾದಿಗಳು ನಡೆಯುವ ಸಮಯ. ಇನ್ನು ಮಧ್ಯರಾತ್ರಿ ಎರಡರಿಂದ ಬೆಳಗಿನ ಆರರವರೆಗಿನ ಅವಧಿಯು ಸಾತ್ವಿಕ ಸ್ವರೂಪದ್ದು. ಸರಸ್ವತಿ ಇದರ ಅಧಿದೇವತೆ. ಸರಸ್ವತಿಯು ಬ್ರಹ್ಮನ ಹೆಂಡತಿಯಾದ್ದರಿಂದ ಅವಳ ಮತ್ತೊಂದು ಹೆಸರು ಬ್ರಾಹ್ಮಿ. ಅವಳ ಪ್ರಹರವಾದ್ದರಿಂದಲೇ ಅದು ಬ್ರಾಹ್ಮೀಸಮಯ. ಈ ಕಾಲದಲ್ಲಿ ಎದ್ದು ಓದಿದರೆ ವಿದ್ಯೆ ಬೇಗ ತಲೆಗೆ ಹತ್ತುತ್ತದೆ. ಚರಕ ಸಂಹಿತೆಯ